# ಅಧ್ಯಾಯ 1

# ಪರಿಚಯ

# 1 ಅಧ್ಯಾಯ
# ಪರಿಚಯ

## 1.1 ಖಜಾನೆ-II ಅವಶ್ಯಕತೆ

ಕರ್ನಾಟಕ ಸರ್ಕಾರವು 2001ರಿಂದ ಖಜಾನೆಗಳ ಗಣಕೀಕರಣಕ್ಕಾಗಿ 'ಖಜಾನೆ' (ಇನ್ನು ಮುಂದೆ ಕೆ1 ಎಂದು ಉಲ್ಲೇಖಿಸಲಾಗುತ್ತದೆ) – ಮಾಹಿತಿ ತಂತ್ರಜ್ಞಾನ (ಐಟಿ) ವ್ಯವಸ್ಥೆಯನ್ನು ಜಾರಿಗೊಳಿಸಿತು. ರಾಜ್ಯ ಸರ್ಕಾರವು ಕೆ1 ಅನ್ನು 'ಖಜಾನೆ-2' (ಇನ್ನು ಮುಂದೆ ಕೆ2 ಎಂದು ಉಲ್ಲೇಖಿಸಲಾಗುತ್ತದೆ) ಎಂದು ಕರೆಯಲ್ಪಡುವ ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಗೆ[1] (ಐಎಫ್ಎಂಎಸ್) ಉನ್ನತೀಕರಿಸಲು ನಿರ್ಧರಿಸಿತು (2009). ಕೆ2 ಜನಸಾಮಾನ್ಯರೊಡನೆ ವಿದ್ಯುನ್ಮಾನ ಅಂತರಸಂಪರ್ಕ ಸಾಧನಕ್ಕಾಗಿ ಇತ್ತೀಚಿನ ಅಂತರ್ಜಾಲ ಆಧಾರಿತ ತಂತ್ರಜ್ಞಾನಗಳನ್ನು ಬಳಸಲು ಪ್ರಸ್ತಾಪಿಸಿತ್ತು. ಬ್ಯಾಂಕ್, ಮಹಾಲೇಖಪಾಲರು ಮುಂತಾದ ಬಾಹ್ಯ ಪಾಲುದಾರರೊಂದಿಗೆ ವಿದ್ಯುನ್ಮಾನವಾಗಿ ಸಂಯೋಜಿಸಲೂ ಇದು ಪ್ರಸ್ತಾಪಿಸಿತ್ತು.

ಕೆ2 ಯೋಜನೆಯು ಈ ಕೆಳಗಿನ ಗುರಿಗಳನ್ನು ಹೊಂದಿತ್ತು:

- ರಾಜ್ಯದ ಸಾರ್ವಜನಿಕ ಹಣಕಾಸಿನ ದಕ್ಷ, ಪರಿಣಾಮಕಾರಿ ಮತ್ತು ಪಾರದರ್ಶಕ ನಿರ್ವಹಣೆಯ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಸಾಕಾರಗೊಳಿಸುವುದು, ಪಾಲುದಾರರ ಹೊಣೆಗಾರಿಕೆಯನ್ನು ಬಲಪಡಿಸುವುದು;
- ಎಲ್ಲಾ ಪಾಲುದಾರರಿಗೆ ಅವರ ಹಣಕಾಸಿನ ವಹಿವಾಟುಗಳನ್ನು ಕೈಗೊಳ್ಳಲು ಮತ್ತು ದತ್ತಾಂಶವನ್ನು ತಡೆರಹಿತ ರೀತಿಯಲ್ಲಿ ಹಂಚಿಕೊಳ್ಳಲು, ಅವರುಗಳ ನಿರ್ಧಾರ ಕಾರ್ಯ, ಸಾರ್ವಜನಿಕ ಹಣಕಾಸುಗಳ ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆಗಾಗಿ ಸಮಗ್ರ ವಿದ್ಯುನ್ಮಾನ ವೇದಿಕೆಯನ್ನು ಒದಗಿಸುವುದು;
- ದತ್ತಾಂಶಕ್ಕೆ ಹೆಚ್ಚಿನ ಭದ್ರತೆಯನ್ನು ಒದಗಿಸಲು ಮತ್ತು ವ್ಯವಸ್ಥೆಯೊಳಗಿನ ಎಲ್ಲಾ ಚಟುವಟಿಕೆಗಳ ಲೆಕ್ಕಪರಿಶೋಧನೆ ಜಾಡು ಹಿಡಿಯಲು ಅನುವು ಮಾಡಿಕೊಡುವುದು.
- ಭಾಗೀದಾರೀ ಹೊಣೆಗಾರಿಕೆಯೊಂದಿಗೆ ಖಜಾನೆ ಕಾರ್ಯಗಳಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರುವುದು.

ಈ ರೀತಿಯಾಗಿ, ಕೆ1[2] ವ್ಯವಸ್ಥೆಯಲ್ಲಿನ ಸವಾಲುಗಳನ್ನು ಕೆ2 ಯೋಜನೆಯು ಪರಿಹರಿಸುತ್ತದೆ ಮತ್ತು ಸರ್ಕಾರದ ಒಳಗಿನ ಮತ್ತು ಹೊರಗಿನ ಎಲ್ಲಾ ಬಳಕೆದಾರರಿಗೆ ಕ್ರಿಯಾಶೀಲ ಹಣಕಾಸಿನ

---

[1] ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಗಳು, ಸಾರ್ವಜನಿಕ ವಲಯದ ಆಯವ್ಯಯ, ಹಣಕಾಸು ಮತ್ತು ಲೆಕ್ಕಪತ್ರಗಳ ಕಾರ್ಯಾಚರಣೆಗಳ ನಿರ್ವಹಣೆಯನ್ನು ಬೆಂಬಲಿಸುವ ಮತ್ತು ಸಾರ್ವಜನಿಕ ವಲಯ ರಾಜಸ್ವಗಳು ಮತ್ತು ವೆಚ್ಚಗಳ ಕೇಂದ್ರೀಕೃತ ದಾಖಲೆಗಳೊಂದಿಗೆ ಸುಧಾರಿತ ಸಾರ್ವಜನಿಕ ವಲಯ ಹಣಕಾಸು ನಿರ್ವಹಣೆಯನ್ನು ಉತ್ತೇಜಿಸುವ ವ್ಯವಸ್ಥೆಗಳಾಗಿವೆ. ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಯು ಆಯವ್ಯಯ, ಲೆಕ್ಕಪತ್ರ, ಖಜಾನೆ ಮತ್ತು ಸಾರ್ವಜನಿಕ ಋಣ ನಿರ್ವಹಣೆಯ ಕಾರ್ಯಗಳನ್ನು ಸಂಯೋಜಿಸುತ್ತದೆ ಮತ್ತು ತತ್ಸಂಬಂಧವಾದ ವರದಿಗಳ ದಸ್ತಾವೇಜುಗಳನ್ನು ರಚಿಸುತ್ತದೆ.

[2] ಕೆ1 ತಂತ್ರಾಂಶವನ್ನು ಸೀಮಿತ ತಾಂತ್ರಿಕ ಸಾಮರ್ಥ್ಯಗಳು ಮತು ಸಂಪರ್ಕತೆಗಳೊಂದಿಗೆ 2001ರಲ್ಲಿ ರೂಪಿಸಲಾಗಿತ್ತು. ಅದರ ಅಪ್ಲಿಕೇಶನ್ ಅನೇಕ ಭದ್ರತಾ ಲೋಪಗಳನ್ನು ಹೊಂದಿತ್ತು; ಕಾರ್ಯಭಾರದ ಅಗತ್ಯತೆಗಳನ್ನು ನಿಭಾಯಿಸಲು ಸಮರ್ಥವಾಗಿರಲಿಲ್ಲ ಮತ್ತು ಸೀಮಿತ ಬ್ಯಾಂಡ್ ವಿಡ್ತ್ ವ್ಯವಸ್ಥೆಯ ಮೇಲೆ ಆಧರಿತವಾಗಿತ್ತು; ಅದು ಕೇವಲ ಮಾಸಿಕ ಲೆಕ್ಕಗಳನ್ನು ಮಾತ್ರ ತಯಾರಿಸಲು ಶಕ್ಯವಿತ್ತು, ದೈನಂದಿನ ಲೆಕ್ಕಗಳು ಮುಂತಾದವುಗಳಿಗೆ ಶಕ್ಯವಿರಲಿಲ್ಲ.

ನಿರ್ವಹಣೆಯನ್ನು ಸಕ್ರಿಯಗೊಳಿಸಲು ಕ್ರಿಯಾತ್ಮಕ ಮತ್ತು ತಾಂತ್ರಿಕ ನಿರ್ಬಂಧಗಳನ್ನು ಪರಿಹರಿಸುತ್ತದೆ ಎಂದು ಯೋಜಿಸಲಾಗಿತ್ತು.

## 1.2 ಕೆ2ಗಾಗಿನ ತಾಂತ್ರಿಕ ಸಂಯೋಜಕರು

ರಾಜ್ಯ ಸರ್ಕಾರವು, ಟೆಂಡರ್ ಪ್ರಕ್ರಿಯೆಯ ಮೂಲಕ ತಾಂತ್ರಿಕ ಸಂಯೋಜಕ (ಸಿಸ್ಟಮ್ ಇಂಟಿಗ್ರೇಟರ್ – ಎಸ್ಐ) ಎಂದು ಗುರುತಿಸಲ್ಪಟ್ಟ ಮೆ.ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಸಂಸ್ಥೆಗೆ ಯೋಜನೆಯ ಅನುಷ್ಠಾನವನ್ನು ವಹಿಸಿಕೊಟ್ಟಿತು (ಅಕ್ಟೋಬರ್ 2011). ಕೆಲಸದ ವ್ಯಾಪ್ತಿಯು ಅಪ್ಲಿಕೇಶನ್ ಸಾಫ್ಟ್‌ವೇರ್ ಅಭಿವೃದ್ಧಿ, ಅಪ್ಲಿಕೇಶನ್‌ಗೆ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯವನ್ನು ಒದಗಿಸುವುದು, ಮಾಹಿತಿ ಸಂವಹನ, ಅಂತಿಮ ಬಳಕೆದಾರರ ತರಬೇತಿ ಮತ್ತು ತಾಂತ್ರಿಕ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು (ಒ ಅಂಡ್ ಎಮ್) ಒಳಗೊಂಡಿತ್ತು. ತಾಂತ್ರಿಕ ಸಂಯೋಜಕರು ತಾಂತ್ರಿಕ ವ್ಯವಸ್ಥೆಯನ್ನು ಸ್ಥಾಪಿಸಿ, ಆರು ವರ್ಷಗಳ ಕಾಲ ಕಾರ್ಯಾಚರಣೆ ಮತ್ತು ನಿರ್ವಹಣೆ ಬೆಂಬಲ ಒದಗಿಸಬೇಕಿತ್ತು.


## 1.3 ಕೆ2ವಿನ ಪ್ರಮುಖ ತಾಂತ್ರಿಕ ಲಕ್ಷಣಗಳು

ಕೆ2 ಇಂಟರ್ನೆಟ್ ಮತ್ತು ಇಂಟ್ರಾನೆಟ್‌ನಲ್ಲಿ ಎರಡು ಪ್ರತ್ಯೇಕ ಬಳಕೆದಾರ ಪೋರ್ಟಲ್‌ಗಳನ್ನು ಹೊಂದಿರುವ ಒಂದು ಅಂತರ್ಜಾಲ ಆಧಾರಿತ ಅಪ್ಲಿಕೇಶನ್ ಆಗಿದೆ. ಇಂಟರ್ನೆಟ್ ಪೋರ್ಟಲ್ ನಾಗರಿಕ ಕೇಂದ್ರಿತ ಸೇವೆಗಳನ್ನು ಒದಗಿಸಲು ಅಂತರ್ಜಾಲ ಇಂಟರ್ಫೇಸ್ ಆಗಿ ಕಾರ್ಯನಿರ್ವಹಿಸುತ್ತದೆ ಮತ್ತು ಇಂಟ್ರಾನೆಟ್ ಪೋರ್ಟಲ್ ಇಲಾಖೆಯ ಬಳಕೆದಾರರಿಗೆ ಹಾಗೂ ಇದು ಎಲ್ಲಾ ಅಪ್ಲಿಕೇಶನ್ ಸೇವೆಗಳಿಗೆ ಒಂದೇ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಸೂಕ್ತ ದೃಢೀಕರಣ ಮತ್ತು ರುಜುವಾತಿನ ನಂತರ ಬಳಕೆದಾರರಿಗೆ ಅವರ ಕಾರ್ಯಭಾರದ ಆಧಾರದ ಮೇಲೆ ಸೇವೆಗಳನ್ನು ಬಳಸಲು ಅವಕಾಶವನ್ನು ಒದಗಿಸಲಾಗುತ್ತದೆ. ರಾಜ್ಯ ಸರ್ಕಾರದ ಖಜಾನೆಗಳಿಗೆ ಸಂಪರ್ಕವನ್ನು ಒದಗಿಸಲು ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್ (ಕೆಎಸ್‌ಡಬ್ಲ್ಯುಎಎನ್) ಅನ್ನು ಬಳಸಲಾಗುತ್ತದೆ

## 1.4 ಸಾಂಸ್ಥಿಕ ರಚನೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಆರ್ಥಿಕ ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರಾಗಿದ್ದಾರೆ. ಆರ್ಥಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಮತ್ತು ಸರ್ಕಾರದ ಲೆಕ್ಕಪತ್ರಗಳನ್ನು ನಿರ್ವಹಿಸುವ ಖಜಾನೆಗಳ ಆಯುಕ್ತರ ನೇತೃತ್ವದ ಖಜಾನೆ ಇಲಾಖೆಯು ಕೆ2 ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿದೆ. ಯೋಜನಾ ನಿರ್ದೇಶಕರು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ದೈನಂದಿನ ಕಾರ್ಯಾಚರಣೆಗಳಿಗಾಗಿ ಯೋಜನಾ ನಿರ್ವಹಣಾ ಘಟಕವು (ಪಿಎಮ್‌ಯು) ಅವರಿಗೆ ಸಹಾಯ ಮಾಡುತ್ತದೆ.

ತಾಂತ್ರಿಕ ಸಂಯೋಜಕರೊಂದಿಗಿನ ಕರಾರಿನ ಬಾಧ್ಯತೆಗಳನ್ನು ಯೋಜನಾ ನಿರ್ದೇಶಕರು ಮಾಸ್ಟರ್ ಸೇವಾ ಒಪ್ಪಂದದ (ಎಮ್‌ಎಸ್‌ಎ) ನಿಬಂಧನೆಗಳಿಗನುಸಾರವಾಗಿ ಮೇಲ್ವಿಚಾರಣೆ ಮಾಡುತ್ತಾರೆ.




## 1.5 ಲೆಕ್ಕಪರಿಶೋಧನಾ ಉದ್ದೇಶಗಳು

ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳಲು ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಪ್ರಯತ್ನಿಸಿದೆ:

- ಯೋಜನೆಯು ಖಜಾನೆ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸುವ ಮತ್ತು ಅವುಗಳನ್ನು ಪಾಲುದಾರರ ವ್ಯವಸ್ಥೆಗಳೊಂದಿಗೆ ಸಂಯೋಜಿಸುವ ಯೋಜಿತ ಉದ್ದೇಶಗಳನ್ನು ಸಾಧಿಸಿತೇ;
- ರಾಜ್ಯದ ವಿವಿಧ ನಿಯಮಗಳು ಮತ್ತು ಸಂಹಿತೆಗಳಲ್ಲಿ ಅಡಕಗೊಂಡಿರುವ ವ್ಯವಹಾರ ನಿಯಮಗಳನ್ನು ಕೆ2 ಯೋಜನೆಯಲ್ಲಿ ಅಳವಡಿಸಲಾಗಿದೆಯೇ;
- ಕೆ2 ಯೋಜನೆಯ ಮಾಹಿತಿ ವ್ಯವಸ್ಥೆಯ ನಿಯಂತ್ರಣಗಳು ಸ್ವತ್ತುಗಳನ್ನು ರಕ್ಷಿಸಲು ಸಮರ್ಥವಾಗಿವೆಯೇ, ಮಾಹಿತಿ ಸಮಗ್ರತೆಯನ್ನು ಖಾತ್ರಿಪಡಿಸುತ್ತವೆಯೇ ಮತ್ತು ಸುರಕ್ಷಿತ ಮತ್ತು ತಡೆರಹಿತ ಖಜಾನೆ ಕಾರ್ಯಾಚರಣೆಗಳಿಗೆ ಸಹಕಾರಿಯಾಗಿವೆಯೇ; ಮತ್ತು
- ಕೆ2 ಯೋಜನೆಯು ಸರ್ಕಾರದ ಹಣಕಾಸಿನ ಕಾರ್ಯಾಚರಣೆಗಳ ಪರಿಣಾಮಕಾರಿತ್ವ ಮತ್ತು ದಕ್ಷತೆಯನ್ನು ಸುಧಾರಿಸಲು ಕೊಡುಗೆ ನೀಡಿದೆಯೇ.

## 1.6 ಲೆಕ್ಕಪರಿಶೋಧನಾ ಮಾನದಂಡಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧನಾ ಉದ್ದೇಶವಾರು ಮಾನದಂಡಗಳನ್ನು ಈ ಕೆಳಗಿನವುಗಳಿಂದ ಪಡೆಯಲಾಗಿದೆ:

- ✓ ಕರ್ನಾಟಕ ಖಜಾನೆ ನಿಯಮಗಳು ಮತ್ತು ಖಜಾನೆಗಳ ಗಣಕೀಕರಣದ ಕುರಿತು ಭಾರತ ಸರ್ಕಾರದ ಮಾರ್ಗಸೂಚಿಗಳು
- ✓ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಆಯವ್ಯಯ ಕೈಪಿಡಿ;
- ✓ ಎಮ್ಎಸ್ಎ ಮತ್ತು ಮಾಹಿತಿ ವ್ಯವಸ್ಥೆಗಳ ಆಡಳಿತ, ಅಭಿವೃದ್ಧಿ ಮತ್ತು ನಿರ್ವಹಣೆಯ ಬಗೆಗಿನ ಸಾಮಾನ್ಯ ತತ್ವಗಳು;
- ✓ ಯೋಜನೆಯ ಧ್ಯೇಯೋದ್ದೇಶಗಳು ಮತ್ತು ದೃಷ್ಟಿಕೋನ.

## 1.7 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 1 ಏಪ್ರಿಲ್ 2015ರಿಂದ 31 ಮಾರ್ಚ್ 2020ರ ಅವಧಿಗೆ ಫೆಬ್ರವರಿ 2020ರಿಂದ ಡಿಸೆಂಬರ್ 2020ರ ಅವಧಿಯಲ್ಲಿ ನಡೆಸಲಾಯಿತು. ಮಾರ್ಚ್ 2020ರಂತೆ ಕಾರ್ಯಾಚರಣೆಯಲ್ಲಿದ್ದ 12 ಮಾಡ್ಯೂಲ್‌ಗಳಲ್ಲಿ ಆರು[3] ಮಾಡ್ಯೂಲ್‌ಗಳನ್ನು ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಲಾಗಿದೆ. ಲೆಕ್ಕಪರಿಶೋಧನಾ ವಿಧಾನವು ಈ ಕೆಳಗಿನವುಗಳನ್ನು ಒಳಗೊಂಡಿತ್ತು:

i) ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ದಾಖಲೆ ವಿಶ್ಲೇಷಣೆ;

ii) ಅಪ್ಲಿಕೇಶನ್ ನಿಯಂತ್ರಣಗಳು ಮತ್ತು ಬಳಕೆದಾರ ಇಂಟರ್ಫೇಸ್ ವಿಶ್ಲೇಷಣೆ;

iii) ಮಾಸ್ಟರ್ ಸೇವಾ ಒಪ್ಪಂದ, ಸೇವಾ ಮಟ್ಟದ ಒಪ್ಪಂದಗಳ ವಿಶ್ಲೇಷಣೆ;

iv) ಒದಗಿಸಲಾದ ಒಟ್ಟಾರೆ ದತ್ತಾಂಶ ಡಂಪ್‌ಗಳನ್ನು ಬಳಸಿಕೊಂಡು ದತ್ತಸಂಚಯಗಳ ವಿಶ್ಲೇಷಣೆ;

v) ಯೋಜನೆಯ ಜಾಲದ ಕಾರ್ಯಕ್ಷಮತೆಯ ಮತ್ತು, ಭದ್ರತಾ ನಿಯಂತ್ರಣಗಳ ವಿಶ್ಲೇಷಣೆ.

ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರೊಂದಿಗೆ 6 ಜುಲೈ 2020ರಂದು ಪ್ರವೇಶ ಸಮಾವೇಶವನ್ನು ನಡೆಸಲಾಯಿತು, ಮತ್ತು ಲೆಕ್ಕಪರಿಶೋಧನೆಯ ಉದ್ದೇಶಗಳು, ವಿಧಾನ, ವ್ಯಾಪ್ತಿ ಮತ್ತು ಮಾನದಂಡಗಳನ್ನು ವಿವರಿಸಲಾಯಿತು. 26 ಅಕ್ಟೋಬರ್ 2021ರಂದು ಆರ್ಥಿಕ ಇಲಾಖೆಯೊಂದಿಗೆ ನಿರ್ಗಮನ ಸಮಾವೇಶವನ್ನು ನಡೆಸಲಾಯಿತು. ವರದಿಯು ಸರ್ಕಾರದ ಉತ್ತರಗಳು ಮತ್ತು ನಿರ್ಗಮನ ಸಮಾವೇಶದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ. ಸರ್ಕಾರದ ಉತ್ತರಗಳ ದೃಷ್ಟಿಯಿಂದ, ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಮಾರ್ಚ್ 2021ರವರೆಗೆ ಇಂದೀಕರಿಸಲಾಗಿದೆ.

## 1.8 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ರಾಜ್ಯ ಸರ್ಕಾರ, ಟ್ರಜರಿ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ (ಟಿಎನ್‌ಎಂಸಿ) ಮತ್ತು ಟಿಸಿಎಸ್‌ನ ಸಿಬ್ಬಂದಿ ನೀಡಿದ ಸಹಕಾರ ಮತ್ತು ಸಹಾಯಕ್ಕಾಗಿ ಲೆಕ್ಕಪರಿಶೋಧನೆಯು ಕೃತಜ್ಞತೆ ಸಲ್ಲಿಸುತ್ತದೆ.

## 1.9 ಲೆಕ್ಕಪರಿಶೋಧನೆಯ ಫಲಿತಾಂಶಗಳ ಜೋಡಣೆ

ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಈ ಕೆಳಗಿನಂತೆ ಜೋಡಣೆ ಮಾಡಲಾಗಿದೆ:

ಅಧ್ಯಾಯ 1 – ಪರಿಚಯ

ಅಧ್ಯಾಯ 2 – ಯೋಜನೆಯ ನಿರ್ವಹಣೆ

ಅಧ್ಯಾಯ 3 – ಯೋಜನೆಯ ಅನುಷ್ಠಾನ

ಅಧ್ಯಾಯ 4 – ಯೋಜನೆಯ ಭದ್ರತೆ

ಅಧ್ಯಾಯ 5 – ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಅಧ್ಯಾಯ 6 – ನಿರ್ಣಯ ಮತ್ತು ಶಿಫಾರಸುಗಳು

---

[3] ಬಿಲ್ ತಯಾರಿ ಮತ್ತು ಸಲ್ಲಿಕೆ, ಬಿಲ್ ಪ್ರಕ್ರಿಯೆ, ಪಾವತಿ ದೃಢೀಕರಣ, ಲೆಕ್ಕಪತ್ರ ನಿರ್ವಹಣೆ, ಆಯವ್ಯಯ ನಿಯಂತ್ರಣ ಮತ್ತು ಸಾಮಾನ್ಯ ಮಾಡ್ಯೂಲ್–ಮಾಸ್ಟರ್ ದತ್ತಾಂಶ ನಿರ್ವಹಣೆ